## 1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಾಮರಾಜನಗರ, ಪೀಠಾಸೀನ ಕೊಳ್ಳೇಗಾಲ

**ಎಸ್.ಸಿ. 5005/2026**

| | | | | |
|---|---|---|---|---|
| **ಸಾಕ್ಷಿದಾರರ ಹೆಸರು** | : | ಬೇಬಿ.ಆರ್ | **ಪ್ರಮಾಣ ವಚನ ಭೋಧಿಸಿದ ದಿನಾಂಕ** | |
| **ಗಂಡನ ಹೆಸರು** | : | ಅಪಿಲ್. ಪಿ | **03.06.2026** | |
| **ವಯಸ್ಸು** | : | 35 ವರ್ಷ | | |
| **ವೃತ್ತಿ** | : | ಗೃಹಿಣಿ | **ಫ್ರಾ.ಸಾಃ** | **1** |
| **ವಾಸ ಸ್ಥಳ** | : | ಜಾಗೇರಿ ಆರ್.ಬಿ ತಾಂಡ | **ಚಾ.ಸಾಃ** | **1** |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-**

ನನಗೆ ಆರೋಪಿ ಗೊತ್ತು. ಆತ ನನಗೆ ಭಾವ ಆಗಬೇಕು, ಚಾಸಾ 2 ನನ್ನ ಮಗಳು. ಚಾಸಾ 3 ನನ್ನ ತಾತ. ಚಾಸಾ 6 ನನ್ನ ತಾಯಿ. ಚಾಸಾ 4 ಮತ್ತು 5 ರವರು ನನ್ನ ನೆರೆಹೊರೆಯವರು. ನಾನು ಮತ್ತು ನನ್ನ ಗಂಡ ಮಕ್ಕಳೊಂದಿಗೆ ತೋಟದ ಮನೆಯಲ್ಲಿ ವಾಸವಿರುತ್ತೇವೆ. ಸದರಿ ತೋಟದ ಸ.ನಂ 174 ಆಗಿರುತ್ತದೆ. ನನಗೆ 3 ಜನ ಮಕ್ಕಳು. ಇಬ್ಬರು ಹೆಣ್ಣು ಮಕ್ಕಳು ಒಬ್ಬ ಗಂಡು ಮಗ. ಚಾಸಾ 2 ರವರನ್ನು ಬಿಟ್ಟು ಉಳಿದ ಇಬ್ಬರು ಬೆಂಗಳೂರಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ದಿಃ 12.06.2025 ರಂದು ಬೆಳಗ್ಗೆ 8.00 ಗಂಟೆ ಸಮಯದಲ್ಲಿ ನಾನು, ಚಾಸಾ 2 ಮತ್ತು ನನ್ನ ಅಜ್ಜಿ ತಾತ ಮನೆಯಲ್ಲಿದ್ದಾಗ ಆರೋಪಿಯು ತೋಟದಲ್ಲಿ ಗಲೀಜು ಮಾಡುತ್ತಿದ್ದನು. ನಾನು ಆರೋಪಿಯನ್ನು ಪ್ರಶ್ನೆ ಮಾಡಿದ್ದಕ್ಕೆ ಆರೋಪಿಯು ನನ್ನನ್ನು ಹತ್ತಿರ ಬಾ ಎಂದು ಕರೆದನು. ನನ್ನೊಂದಿಗೆ ದೈಹಿಕ ಸಂಪರ್ಕ ಇಟ್ಟುಕೋ ಎಂದು ಹೇಳಿದನು. ನಾನು ಅದಕ್ಕೆ ಒಪ್ಪದೇ ಜಗಳ ಮಾಡಿದೆ. ಆರೋಪಿಯು ನನಗೆ ಸುಳೇ ಲೋಫರ್ ಎಂದು ಬೈದು ಹೋದನು. ಮರುದಿನ ಬೆಳಗ್ಗೆ 7.00 ಗಂಟೆ ಸಮಯದಲ್ಲಿ ಆರೋಪಿಯು ನನ್ನ

ಮನೆಯ ಬಳಿ ಬಂದು ನನಗೆ ಚಪ್ಪಲಿಯಿಂದ ಕೈಯಿಂದ ಹೊಡೆದನು. ನನ್ನ ಕತ್ತಿಗೆ ಕೈ ಹಾಕಿ ಸಾಯಿಸುತ್ತೇನೆ ಎಂದು ಹೇಳಿದನು. ಆರೋಪಿಯು ಕೈಯಿಂದ ಮತ್ತು ಚಪ್ಪಲಿಯಿಂದ ನನ್ನ ಕಿವಿಯ ಬಳಿ, ಕೆನ್ನೆಗೆ ಮತ್ತು ಮೈ ಕೈ ಗೆ ಹೊಡೆದನು. ಚಾಸಾ 2 ಬಿಡಿಸಲು ಬಂದಾಗ ಆರೋಪಿಯು ಚಾಸಾ 2 ರವರಿಗೂ ಕೈಯಿಂದ ಆಕೆಯ ಕುತ್ತಿಗೆ ಭಾಗಕ್ಕೆ ಹೊಡೆದನು. ಅಷ್ಟರಲ್ಲಿ ಚಾಸಾ 3 ರವರು ಸ್ಥಳಕ್ಕೆ ಬಂದರು. ಆರೋಪಿಯು ಅವರಿಗೂ ಕೈಗಳಿಂದ ಹೊಡೆದು ತಳ್ಳಿದನು. ಚಾಸಾ 3 ರವರು ಕೆಳಗೆ ಬಿದ್ದರು. ಚಾಸಾ 4 ಮತ್ತು 5 ಹಾಗೂ ಇತರರು ಸ್ಥಳಕ್ಕೆ ಬಂದು ಜಗಳ ಬಿಡಿಸಿದರು. ಆರೋಪಿಯು ಅವರಿಗೂ ಸಹಾ ನೀವು ಬಂದು ರಕ್ಷಣೆ ಮಾಡಿದರೆ ನಿಮ್ಮನ್ನು ಸಾಯಿಸುತ್ತೇನೆ ಎಂದು ಬೆದರಿಕೆ ಹಾಕಿದನು. ಆರೋಪಿಯು ನಂತರವೂ ದೊಣ್ಣೆಯಿಂದ ನಮಗೆ ಹೊಡೆಯಲು ಬಂದನು. ಸ್ಥಳದಲ್ಲಿದ್ದವರು ಆರೋಪಿಯ ಕೈಯಿಂದ ದೊಣ್ಣೆಯನ್ನು ಕಿತ್ತುಕೊಂಡರು. ಆರೋಪಿಯು ನನಗೆ ನಿನ್ನನ್ನು ಸಾಯಿಸದೇ ಬಿಡುವುದಿಲ್ಲ ಎಂದು ಕೊಲೆ ಬೆದರಿಕೆ ಹಾಕಿದನು. ನಂತರ ನನ್ನನ್ನು ಮತ್ತು ಚಾಸಾ 2 ಮತ್ತು 3 ರವರನ್ನು ಕೊಳ್ಳೇಗಾಲ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದರು. ಆಸ್ಪತ್ರೆಗೆ ಪೋಲೀಸರು ಬಂದು ಹೇಳಿಕೆಯನ್ನು ವೈದ್ಯರ ಮುಂದೆ ಪಡೆದುಕೊಂಡರು. ಪಿರ್ಯಾದಿಯನ್ನು ನಿಪಿ 1 ಎಂದು ಸಾಕ್ಷಿ ಸಹಿಯನ್ನು ನಿಪಿ 1(ಎ) ಎಂದು ಗುರುತಿಸಲಾಯಿತು.

ನಾನು ಆಸ್ಪತ್ರೆಯಲ್ಲಿ 5 ದಿನ ಒಳರೋಗಿಯಾಗಿ ಚಿಕಿತ್ಸೆ ಪಡೆದಿರುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದೆ ಆರೋಪಿಯ ಹಲ್ಲೆ ಮಾಡಲು ಉಪಯೋಗಿಸಿದ ಚಪ್ಪಲಿಯನ್ನು ಮತ್ತು ದೊಣ್ಣೆಯನ್ನು ಗುರುತಿಸಿದ್ದು ಅದನ್ನು ಮು.ಮಾ 1 ಮತ್ತು 2 ಎಂದು ಗುರುತಿಸಲಾಯಿತು. ನಾನು ನ್ಯಾಯಾಧೀಶರ ಮುಂದೆ ಹೇಳಿಕೆ ಕೊಟ್ಟಿರುತ್ತೇನೆ. (ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ಕೊಳ್ಳೇಗಾಲ ರವರಿಂದ ಬಂದ ಮುಚ್ಚಿದ ಲಕೋಟೆಯನ್ನು ತೆರೆದ ನ್ಯಾಯಾಲಯದಲ್ಲಿ ತೆರೆಯಲಾಯಿತು.) ಹೇಳಿಕೆಯನ್ನು ನಿಪಿ 1 ಎಂದು ಸಾಕ್ಷಿ ಸಹಿಯನ್ನು ನಿಪಿ 1(ಎ) ಎಂದು ಗುರುತಿಸಲಾಯಿತು. ನಾನು ಪೋಲೀಸರಿಗೆ ಮುಂದುವರೆದ ಹೇಳಿಕೆಯನ್ನು ನೀಡಿರುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದೆ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ- ಶ್ರೀ  ಬಿ.ಎಸ್.ಆರ್ ವಕೀಲರಿಂದ**

ನನ್ನ ವಿವಾಹವಾಗಿ 20 ವರ್ಷಗಳಾಗಿರುತ್ತದೆ. ನನ್ನ ಮನೆಯಿಂದ ನನ್ನ ತಾಯಿಯ ಮನೆ ಸುಮಾರು ಮುಕ್ಕಾಲು ಕಿ.ಮೀ ಅಂತರ ಇರುತ್ತದೆ. ವಿವಾಹದ ಮೊದಲೇ ಆರೋಪಿ ಮತ್ತು ನನ್ನ ಗಂಡ ಸಂಬಂಧಿಕರಾಗಿದ್ದರು.  ನಾನು ನನ್ನ ಗಂಡನನ್ನು ವಿವಾಹವಾಗಲು ನನ್ನ ತಂದೆತಾಯಿಗೆ ಮತ್ತು ಆರೋಪಿಗೆ ಇಷ್ಟ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಬಲವಂತದಿಂದ ವಿವಾಹವಾಗಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯು ಸತ್ತೆಗಾಲ ಗ್ರಾಮ ಪಂಚಾಯಿತಿಯಲ್ಲಿ ಸದಸ್ಯರಾಗಿದ್ದರು ಒಮ್ಮೊಮ್ಮೆ ಚುನಾವಣೆಯಲ್ಲಿ ಸೋಲುತ್ತಿದ್ದರು ಎಂದರೆ ಸರಿ. ನನ್ನ ತಾಯಿಯೂ ಸಹ ಸತ್ತೆಗಾಲ ಗ್ರಾಮ ಪಂಚಾಯಿತಿಯಲ್ಲಿ ಸದಸ್ಯರಾಗಿದ್ದರು ಒಮ್ಮೊಮ್ಮೆ ಚುನಾವಣೆಯಲ್ಲಿ ಸೋಲುತ್ತಿದ್ದರು ಎಂದರೆ ಸರಿ. ಕಳೆದ ಬಾರಿ ಚುನಾವಣೆಯಲ್ಲಿ ನನ್ನ ತಾಯಿಯ ವಿರುದ್ಧ ಆರೋಪಿಯ ಮಗ ಸ್ವರ್ದಿಸಿ ಗೆದ್ದಿದ್ದಾನೆ ಎಂದರೆ ಸರಿ. ಮೊದಲಿನಿಂದಲೂ ನನ್ನ ಮತ್ತು ಆರೋಪಿಯ ನಡುವೆ ದ್ವೇಷ ಇರುತ್ತದೆ ಎಂದರೆ ಸರಿಯಲ್ಲ. ನಾನು ಮದುವೆ ಆದಾಗಿನಿಂದಲೂ ಇಲ್ಲಿಯವರೆಗೂ ಆರೋಪಿ ನನ್ನೊಂದಿಗೆ ಮಾತನಾಡಿಲ್ಲ ಎಂದರೆ ಸರಿಯಲ್ಲ. ನಾನು ಮೊದಲು ಕೊಳ್ಳೇಗಾಲದಲ್ಲಿ ವಾಸವಿದ್ದೆ. ನಾನು ರಜಾ ದಿನಗಳಲ್ಲಿ ಮಾತ್ರ ಮೇಲೆ ಹೇಳಿದ ನನ್ನ ವಾಸದ ಮನೆಗೆ ಹೋಗುತ್ತಿದ್ದೆ ಎಂದರೆ ಸರಿಯಲ್ಲ. ನನ್ನ ಅಜ್ಜಿ ತಾತನ ಮನೆಗೆ ಹೊಂದಿಕೊಂಡಂತೆ ದಕ್ಷಿಣ ಭಾಗದಲ್ಲಿ ಆರೋಪಿಯ ಮನೆ ಇರುತ್ತದೆ ಎಂದರೆ ಸರಿ. ಆರೋಪಿಯ ಮೊಮ್ಮಕ್ಕಳಿಗೆ ಅವರು ನಮ್ಮ ತೋಟದಲ್ಲಿ ಗಲೀಜು ಮಾಡುತ್ತಾರೆ ಎಂದು ನಾನು ಆಗಾಗ ಅವರ ಮೇಲೆ ಹಲ್ಲೆ ಮಾಡುತ್ತೇನೆ ಎಂದರೆ ಸರಿಯಲ್ಲ. ನಾನು ಈ ಸಂಬಂಧ ಆರೋಪಿಯ ಹೆಂಡತಿ ಮತ್ತು ಸೊಸೆಯೊಂದಿಗೆ ಜಗಳ ಮಾಡುತ್ತೇನೆ ಎಂದರೆ ಸರಿಯಲ್ಲ.  ಆರೋಪಿ ಮತ್ತು ನನ್ನ ಗಂಡನ ನಡುವೆ ಭೂಮಿ ಸಂಬಂಧ ವೈ ಮನಸ್ಸು ಇರುತ್ತದೆ ಎಂದರೆ ಸರಿಯಲ್ಲ. ನಿವೇಶನದ ಸಂಬಂಧ ನನ್ನ ಗಂಡ ಮತ್ತು ಆರೋಪಿಯ ನಡುವೆ ವೈ ಮನಸ್ಸು  ಇದೆ ಎಂದರೆ ಸರಿಯಲ್ಲ. ಆರೋಪಿ ವಿರುದ್ಧ ಪ್ರಕರಣದ ದಾಖಲು ಮಾಡುವ ಉದ್ದೇಶನಿಂದ ಆರೋಪಿಯು ನನ್ನನ್ನು ದೈಹಿಕ ಸಂಪರ್ಕ ಹೊಂದು ಬಾ ಎಂದು ಕರೆದನು ಎಂಬ ಪದ ಬಳಿಕೆ ಮಾಡಿದ್ದೇನೆ ಎಂದರೆ ಸರಿಯಲ್ಲ. ನನ್ನ ಗಂಡ ಪೋಲೀಸ್ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದರಿಂದ ಪ್ರಭಾವ ಬಳಸಿ ಆರೋಪಿಯ ವಿರುದ್ಧ ಸುಳ್ಳು ದೂರು ನೀಡಿದ್ದೇನೆ

ಎಂದರೆ ಸರಿಯಲ್ಲ. ಆರೋಪಿಯು ನನ್ನೊಂದಿಗೆ ಜಗಳ ಮಾಡಿಲ್ಲ, ಅಶ್ಲೀಲವಾಗಿ ನಡೆದುಕೊಂಡಿಲ್ಲ, ಕೈಗಳಿಂದ ಚಪ್ಪಲಿಯಿಂದ ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ. ಮು.ಮಾ 1 ಮತ್ತು 2ಅನ್ನು ಈ ಪ್ರಕರಣಕ್ಕೆಂದು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಯಾವುದೇ ಗಾಯಗಳು ಆಗಿಲ್ಲದಿದ್ದರೂ ನಾನು ಸುಳ್ಳು ಚಿಕಿತ್ಸೆ ಪಡೆದಿದ್ದೇನೆ ಎಂದರೆ ಸರಿಯಲ್ಲ. ನಿವೇಶನವನ್ನು ಆರೋಪಿಯಿಂದ ಪಡೆದುಕೊಳ್ಳಲು ಬೆದರಿಕೆಗಾಗಿ ಸುಳ್ಳು ದೂರು ನೀಡಿದ್ದೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಾಮರಾಜನಗರ, ಪೀಠಾಸೀನ ಕೊಳ್ಳೇಗಾಲ